ಚರಿತ್ರೆ. ಆದರೆ, ಇದನ್ನು ವೈಭವೀಕರಿಸಿದೆವು. ಇಂಥ ಅವಮಾನ, ದೌರ್ಜನ್ಯ, ಸಾವನ್ನು ಚರಿತ್ರೆ ಯಾಕೆ ವೈಭವೀಕರಿಸಿತು? ಇಂಥ ಕಥನಗಳ ಮೂಲಕ ನಾವು ಎಂಥ ಸಮಾಜ, ನಾಗರಿಕತೆಯನ್ನು ಕಟ್ಟಲಿಕ್ಕೆ ಹೊರಟಿದ್ವಿ? ಇವೆಲ್ಲ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು ಅಂತ ನನಗನಿಸಿತ್ತು. ಇಂಥ ಪ್ರಶ್ನೆಗಳನ್ನು ಕೇಳಿಕೊಳ್ಳದೆ ಭೂತಕಾಲವನ್ನು ವೈಭವೀಕರಿಸುವ ಅಧ್ಯಯನಗಳಿಂದ ಯಾವ ಲಾಭವಿದೆ? ಇವೆಲ್ಲ ನನಗೆ ಕಾಡತೊಡಗಿದವು. ಈ ತಿಳಿವಳಿಕೆ ನನ್ನ ಮುಂದಿನ ಅಧ್ಯಯನಗಳಲ್ಲೂ ಬೇರೆ ಬೇರೆ ರೀತಿಯಲ್ಲಿ ಇಣುಕಿದೆ.

◆ **ನೀವು ಅನೇಕ ಸಲ ಕನ್ನಡ ವಿಮರ್ಶಾ ಸಂಸ್ಕೃತಿ ಬಗ್ಗೆ ಹೇಳುವಾಗ ಪಾಶ್ಚಾತ್ಯ ವಿಮರ್ಶೆ ಯಾವುದನ್ನು ಬಳಸದೇ ಬಿಟ್ಟಿದೆಯೊ, ಅಂದರೆ ಅಲ್ಲಿ ಅಪ್ರಸ್ತುತವಾಗಿದೆಯೊ ಅಂಥ ಅನೇಕ ವಿಮರ್ಶಾ ಮಾನದಂಡಗಳನ್ನ ಕನ್ನಡ ವಿಮರ್ಶೆ ಬಳಸ್ತಾ ಬಂದಿದೆ ಅಂತ ಹೇಳಿದ್ರಿ. ಇದರಿಂದೆಲ್ಲ ಕನ್ನಡ ಸಾಹಿತ್ಯ ಸಂಸ್ಕೃತಿಯ ಓದಿಗೆ ಹೆಚ್ಚಿನ ಪ್ರಯೋಜನ ಇಲ್ಲ ಅಂತ ಅಭಿಪ್ರಾಯ ಪಟ್ಟಿದ್ದೀರಿ. ಇಂಥದ್ದೊಂದು ಅನಿಸಿಕೆ ಅಥವಾ ಅನುಮಾನ ಯಾಕೆ ಹುಟ್ಟಿಕೊಂಡಿತು?**

ಕನ್ನಡ ವಿಮರ್ಶೆಯ ಸಂಸ್ಕೃತಿಯಲ್ಲಿ ಈ ಪ್ರಶ್ನೆಯನ್ನು ಎತ್ತಿದವರು ಕೆ.ವಿ. ನಾರಾಯಣ. ಆದರೆ, ಕನ್ನಡ ಸಮಾಜ ಇದನ್ನು ಇನ್ನೂ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಅನ್ನೋ ವಿಷಾದ ನನಗಿದೆ. ಅವರು ಟಿ.ಎಸ್. ಎಲಿಯೆಟ್‌ಗೆ ಸಂಬಂಧಿಸಿದ ಒಂದು ವಿಚಾರ ಸಂಕಿರಣದಲ್ಲಿ 'ಕನ್ನಡಿಗಳಿನ್ನು ಸಾಕು' ಅಂತ ಮಾತಾಡಿದ್ರು. ಅದು ಪಾಶ್ಚಾತ್ಯ ವಿಮರ್ಶೆ ಮತ್ತು ಕನ್ನಡ ಸಾಹಿತ್ಯ ಇವೆರಡರ ಸಂಬಂಧವನ್ನು ನೋಡಿದ ರೀತಿ ಮತ್ತು ನೋಡಿಕೊಳ್ಳಬೇಕಾದ ರೀತಿ ಇವೆರಡರ ಕುರಿತೂ ಮಾತಾಡಿದೆ. ನನ್ನ ಪ್ರಕಾರ ಕನ್ನಡ ಚಿಂತನೆಯ ದಿಕ್ಕು ಬದಲಾಯಿಸಬಲ್ಲಂಥ ಚಿಂತನೆ ಇದು. ಜೊತೆಗೆ ನಾವು ಯಾವುದನ್ನು ನವ್ಯ ಅಂತ ಕರೀತೀವಿ ಆ ನವ್ಯದ ಲೇಖಕರ ಸೃಷ್ಟಿಯ ವಿನ್ಯಾಸವನ್ನೇ ಪ್ರಶ್ನೆ ಮಾಡಿತು. ಎಲಿಯೆಟ್ ಯಾವುದನ್ನ ತನ್ನ ಸಂದರ್ಭದಲ್ಲಿ ಯುರೋಪಿನಲ್ಲಿ ಮುಖ್ಯವೆಂದು ತಿಳಿದಿದ್ದನೊ ಅದನ್ನು ನವ್ಯರು ತಮ್ಮದು ಅಂತ ಭಾವಿಸಿಕೊಂಡು ಯಥಾವತ್ತಾಗಿ ಬಳಸಿಕೊಂಡರು. ಗೋಪಾಲಕೃಷ್ಣ ಅಡಿಗರ 'ಭೂತ' ಕವಿತೆ ಇದೆ. ಅದು ಕೇವಲ ಒಂದು ಪದ್ಯವಾಗಿ ಮಾತ್ರವಲ್ಲ. ನಮ್ಮ ಕ್ರಿಯೇಟಿವ್ ರೈಟಿಂಗ್ಸ್‌ನಲ್ಲೂ ಒಂದು ತತ್ತ್ವವಾಗಿ ಬಂತು. 'ಸಂಸ್ಕಾರ'ದಂಥ ಕಾದಂಬರಿಯಲ್ಲಿ, ಚಿತ್ತಾಲರ ಆರಂಭದ ಕತೆಗಳಲ್ಲೂ ಎಲಿಯೆಟ್ ತತ್ತ್ವ ಬಂತು. ನವ್ಯದ ಬಹುತೇಕ ಇಂಗ್ಲಿಷ್ ಮೇಷ್ಟ್ರುಗಳು ಕನ್ನಡ ವಿಮರ್ಶೆಯನ್ನು ದಾರಿ ತಪ್ಪಿಸಿದ್ರು. ಉದಾಹರಣೆಗೆ, ಈ 'ಏಲಿಯನೇಶನ್' ಕಲ್ಪನೆ ಇದೆಯಲ್ಲ, 'ಹೌದು, ಇದು ನಮ್ಮಲ್ಲೂ ಇದೆ' ಅನ್ನೋ ಹಾಗೆ ಬರೆಯಲು ಶುರು ಮಾಡಿದ್ರು. ಗಿರಿ ಅವರ 'ಗತಿಸ್ಥಿತಿ' ನೋಡಿ. ಲಂಕೇಶರು ಕೂಡ ತಮ್ಮ 'ಬಿರುಕು' ಕಾದಂಬರಿಯಲ್ಲಿ ಓಡಿಸ್ತಾರೆ ಓಡಿಸ್ತಾರೆ ಆ ಬಸವರಾಜನನ್ನು, ಎಲ್ಲಿಯೂ ಅವನಿಗೆ ನಿಂತ್ಕೊಳ್ಳಕ್ಕೆ ಆಗೋದಿಲ್ಲ. ಇಪ್ಪತ್ತಾರು ಕಡೆ ಓಡ್ತದೆ ಪಾಪ ಅದು. ನನಗೆ ಇದನ್ನೆಲ್ಲ ಓದಿದಾಗ ಕೆ.ವಿ.ಎನ್. ಬರೆಯುವದಕ್ಕಿಂತ ಪೂರ್ವದಲ್ಲಿಯೂ ಅಪ್ರಜ್ಞಾಪೂರ್ವಕವಾಗಿ ಅನ್ನಿಸ್ತಿತ್ತು; ಏನಿದು ಇವರೆಲ್ಲ ಹೀಗೆ ಬರೆದಿದ್ದಾರಲ್ಲ ಅಂತ. ಇವರೆಲ್ಲರ ನಡುವೆ ಶಿವರಾಮ ಕಾರಂತರೇ ಗಟ್ಟಿ ಅನ್ನಿಸ್ತಿತ್ತು. ಕುವೆಂಪು ಗಟ್ಟಿ ಅನ್ನಿಸ್ತಿತ್ತು. ಇವರೇ ತುಂಬಾ ಸೂಕ್ಷ್ಮವಾಗಿ ಹೇಳ್ತಿದ್ದಾರೆ ಅನ್ನಿಸ್ತಿತ್ತು. ಇವರ ನಡುವೆ 'ಸಂಸ್ಕಾರ'ದ ಈ ಪ್ರಾಣೇಶಾಚಾರ್ಯರ ಪಾತ್ರವೇ ತುಂಬಾ ಕೃತಕ ಅನ್ನಿಸತೊಡಗಿತು. ಆತ ಚಂದ್ರಿಯನ್ನು ಭೋಗಿಸುವಾಗ ಮಣ್ಣಿನ ವಾಸನೆ ಕಂಡುಕೊಂಡ ಅಂತಿದೆ. ಇದು ನಿರೂಪಣೆಯ ದೋಷ. ಪ್ರಾಣೇಶಚಾರ್ಯರಂಥವರ ಮಣ್ಣಿನ ಕಲ್ಪನೆಯೇ ಐರೋಪ್ಯ ಪ್ರಣೀತವಾದದ್ದು. ನನ್ನ ಪ್ರಕಾರ ಪ್ರಾಣೇಶಾಚಾರ್ಯ ಹೈಬ್ರಿಡ್ ಕ್ಯಾರೆಕ್ಟರ್. ಇಂಥ ಹಲವಾರು ಹೈಬ್ರಿಡ್ ಕ್ಯಾರೆಕ್ಟರ್‌ಗಳು ಸೃಷ್ಟಿಯಾದವು. ಎಲಿಯೆಟ್ ಪ್ರಕಾರ ಸಂಸ್ಕೃತಿ ಅನ್ನುವುದು ಒಂದೇ ತೆರನಾದದ್ದು. ಹಾಗಾದರೆ,